

# ಪವನ್ ಕಲ್ಯಾಣ್ ವೀರನ ಅವತಾರ

ನಿರ್ದೇಶಕ ಕ್ರಿಷ್ ಜಾಗರ್ಲಮೂಡಿ ಅವರ ಅರ್ಧ ದಶಕದ ಶ್ರಮ ಕೊನೆಗೂ ತೆರೆಗೆ ಬರಲು ಸಿದ್ಧವಾಗಿದೆ. 'ಹರಿ ಹರ ವೀರ' ತೆಲುಗು ಚಿತ್ರ ಮೇ ತಿಂಗಳಲ್ಲಿ ತೆರೆಕಾಣಲಿದೆ. ಚಿತ್ರದ ನಾಯಕ ಪವನ್ ಕಲ್ಯಾಣ್. ಎಲ್ಲವೂ ಅಂದುಕೊಂಡಂತೆ ಆಗಿದ್ದಿದ್ದರೆ 2021ರಲ್ಲೇ ಸಿನಿಮಾ ತೆರೆಕಾಣಬೇಕಿತ್ತು. ಆದರೆ, ಪವನ್ ಅವರ ರಾಜಕೀಯ ಕೆಲಸಗಳು ಹಾಗೂ ಕೋವಿಡ್ ಕಾರಣದಿಂದಾಗಿ ಚಿತ್ರ ತಯಾರಾಗುವುದು ವಿಳಂಬ ಆಯಿತು.

ಹರಿ ಹರ ವೀರ ಐತಿಹಾಸಿಕ ಕಥನ. ಮೊಘಲರಿಂದ ಕೊಹಿನೂರ್ ವಜ್ರ ದೋಚಿದ ಪಾತ್ರ. ಔರಂಗಜೇಬ್ ಸಮಾಧಿ ವಿಷಯವು ಈಗ ವಿವಾದದ ಕೇಂದ್ರವಾಗಿದೆ. ಅದರಲ್ಲೂ ಮಹಾರಾಷ್ಟ್ರದ ನಾಗ್ಪುರದಲ್ಲಿ ದೊಡ್ಡ ಗಲಭೆಯೇ ನಡೆದಿದೆ. ಇಂತಹ ಔರಂಗಜೇಬನ ಪಾತ್ರವೂ ಚಿತ್ರದಲ್ಲಿ ಇದೆ. ಆ ಪಾತ್ರದಲ್ಲಿ ಬಾಬಿ ಡಿಯೋಲ್ ಅಭಿನಯಿಸಿದ್ದಾರೆ.

ಕ್ರಿಶ್ ಅವರು 'ಕೃಷ್ಣಂ ವಂದೇ ಜಗದ್ಗುರು', 'ವೇದಂ', 'ಗಮ್ಯಂ' ರೀತಿಯ ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿದವರು. ಇದು ದೊಡ್ಡ ಭಿತ್ತಿಯ ಸಿನಿಮಾ ಆಗಿರುವುದರಿಂದ ಅವರೊಟ್ಟಿಗೆ ನಿರ್ದೇಶಕರಾಗಿ ಎ.ಎಂ. ಜ್ಯೋತಿ ಕೃಷ್ಣ ಅವರೂ ಕೆಲಸ ಮಾಡಿದ್ದಾರೆ. ಎಂ.ಎಂ. ಕೀರವಾಣಿ ಸ್ವರ ಸಂಯೋಜನೆಯ ಹಾಡುಗಳು ಚಿತ್ರಕ್ಕೆ ಪೂರಕವಾಗಿ ಒದಗಿಬರುವ ನಿರೀಕ್ಷೆ ಇದೆ.

ನಿಧಿ ಅಗರ್ವಾಲ್, ನರ್ಗೀಸ್ ಫಕ್ರಿ, ನೋರಾ ಫತೇಹಿ, ಸತ್ಯರಾಜ್ ತಾರಾಗಣದಲ್ಲಿ ಇದ್ದಾರೆ. ದಯಂಕರ್ ರಾವ್ ನಿರ್ಮಾಣದ ಚಿತ್ರವು ಸುಮಾರು 200 ಕೋಟಿ ರೂಪಾಯಿಯಷ್ಟು ದೊಡ್ಡ ಬಜೆಟ್ ನಲ್ಲಿ ತಯಾರಾಗಿದೆ. ಮುಸ್ಲಿಮರಿಂದ ವಜ್ರ ಕಸಿದುಕೊಳ್ಳುವ ಪ್ರಸಂಗ ಇರುವುದೇ ಚಿತ್ರವನ್ನು ಗೆಲ್ಲಿಸಬಲ್ಲ ಅಂಶ ಎಂದು ಅದಾಗಲೇ ವಿಶ್ಲೇಷಣೆಗಳು ನಡೆಯುತ್ತಿವೆ.

# 'ಸಿಕಂದರ್' ಸಮಯ

ಸಿನಿಮಾ ಪ್ರಚಾರದ ಎಲ್ಲ ದಾರಿಗಳನ್ನೂ ಹುಡುಕುವ ಜಮಾನ ಇದು. ಆದರೆ, ಸಲ್ಮಾನ್ ಖಾನ್ ವಿಷಯದಲ್ಲಿ ತಾನಾಗಿಯೇ ಕೆಲವು ಪರಿಣಾಮಗಳು ಅಭಿಮಾನಿಗಳಿಂದ ಆಗುತ್ತಿರುತ್ತದೆ. ಈದ್ ಸಂದರ್ಭದಲ್ಲಿ ಸಿನಿಮಾ ಬಿಡುಗಡೆ ಮಾಡುವ ಪರಿಪಾಟ ನಡೆಸಿಕೊಂಡು ಬಂದಿರುವ ಅವರು, ಈ ಸಲ 'ಸಿಕಂದರ್' ಹಿಂದಿ ಚಿತ್ರ ನೆಚ್ಚಿಕೊಂಡಿದ್ದಾರೆ. ಚಿತ್ರದ 'ಜೊಹರ್ ಜಬೀ' ಎಂಬ ಹಾಡೊಂದು ಕೆಲವು ದಿನಗಳ ಹಿಂದೆ ಬಿಡುಗಡೆಯಾಯಿತು. ಅದರಲ್ಲಿ ಸಲ್ಮಾನ್ ಅವರು ಕಪ್ಪು ಬಣ್ಣದ ಕುರ್ತಾ ಪೈಜಾಮ ಧರಿಸಿದ್ದರು. ಆ ಕುರ್ತಾ ಮೇಲೆ ಬಿಳಿ ಬಣ್ಣದ ಎದ್ದುಕಾಣುವ ಕುಸುರಿ. ಇದನ್ನು 'ಪಾಕಿಸ್ತಾನಿ' ಕುಸುರಿ ಎಂದು ಕರೆಯುತ್ತಾರೆ. ಅದು ಉತ್ತರ ಭಾರತದ ಬಹುತೇಕ ಕಡೆ ಯುವಕರ ಫ್ಯಾಷನ್ ಸ್ಟೇಟ್‌ಮೆಂಟ್ ಆಗಿದೆ.

ಈದ್ ಸಂದರ್ಭದಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವವರು ಹೊಸ ಉಡುಗೆ ಧರಿಸಿ, ಅತ್ತರ್ ಹಾಕಿಕೊಂಡು ಮಿಂಚುತ್ತಾ ಸಂಭವಿಸುವುದು ರೂಢಿ. ಬಹುತೇಕ ಪುರುಷರು ಕುರ್ತಾ ಧರಿಸುತ್ತಾರೆ. ಈ ಬಾರಿ 'ಸಿಕಂದರ್' ಕುರ್ತಾ ಎಂದೇ ಅದು ಬ್ರ್ಯಾಂಡ್ ಆಗುವಷ್ಟು ಜನಪ್ರಿಯವಾಗಿದೆ.

ಪಾಕಿಸ್ತಾನಿ ಕುಸುರಿ ಮಾಡಲು ಬಳಸುವ ವಸ್ತ್ರವು ಹೆಚ್ಚಾಗಿ ಗುಜರಾತ್‌ನಲ್ಲಿ ತಯಾರಾಗುತ್ತದೆ. ಅಲ್ಲಿಂದ ಉತ್ತರ ಪ್ರದೇಶ, ಬಿಹಾರ, ದೆಹಲಿ ಮುಂತಾದ ರಾಜ್ಯಗಳಿಗೆ ಹೋಗುತ್ತದೆ. ಕೆಲವರು ದರ್ಜಿಗಳಿಂದಲೇ ಕುರ್ತಾ ಪೈಜಾಮ ಹೊಲಿಸುತ್ತಾರೆ. ಕುಸುರಿಯನ್ನು ಬೇರೊಬ್ಬರಿಂದ ಮಾಡಿಸುತ್ತಾರೆ.

ದೆಹಲಿಯಲ್ಲಿ ಸಿಕಂದರ್ ಕುರ್ತಾಗೆ ವಿಪರೀತ ಬೇಡಿಕೆ ಬಂದಿದೆ. ಅದನ್ನು ಹೊಲಿದುಕೊಡಲು ದರ್ಜಿಗಳು ನಿರಾಕರಿಸುವಷ್ಟು ಕೈತುಂಬಾ ಅವರಿಗೆ ಕೆಲಸಗಳು ಇದ್ದವು. ಹೀಗಾಗಿ ರೆಡಿಮೇಡ್ ಕುರ್ತಾಗಳಿಗೆ ಹಿಂದೆಂದೂ ಇಲ್ಲದಷ್ಟು ಬೇಡಿಕೆ ಬಂದಿತು. ಅದರಲ್ಲೂ ಕಪ್ಪು ಕುರ್ತಾಗಳನ್ನು ಕೊಳ್ಳಲು ಪೋಷಕರ ಮನವೊಲಿಸಲು ಕೆಲವು ತರುಣರು ಬುದ್ಧಿ ಖರ್ಚು ಮಾಡಿದರು. ಯಾಕೆಂದರೆ, ಈದ್ ದಿನ ಬಿಳಿಯುಡುಗೆ ಶ್ರೇಷ್ಠ ಎಂದು ಅನೇಕರು ಭಾವಿಸಿದ್ದಾರೆ.

ಸಲ್ಮಾನ್ ಖಾನ್ ಅಭಿನಯದ 'ಸಿಕಂದರ್' ಸಿನಿಮಾ ಹಾಡುಗಳು ಹಿಂದಿನಷ್ಟು ಜನಪ್ರಿಯವಾಗಿಲ್ಲ. ಅವರೊಟ್ಟಿಗೆ ರಶ್ಮಿಕಾ ಮಂದಣ್ಣ ಕೆಮಿಸ್ಟ್ರಿ ಕೂಡ ಚೆನ್ನಾಗಿಲ್ಲ ಎಂದು ಅನೇಕರು ಟ್ರೋಲ್ ಮಾಡಿದರು. ಇವೆಲ್ಲವೂ ಒಂದು ಬಗೆಯಲ್ಲಿ ಪ್ರಚಾರ ನೀಡುತ್ತಾ ಬಂದವು. ಆದರೆ, ಪಾಕಿಸ್ತಾನಿ ಕುಸುರಿಯ ಕುರ್ತಾ ನೀಡಿದ ಪ್ರಚಾರದ ಎದುರು ಇವೆಲ್ಲ ಏನೂ ಇಲ್ಲ ಎಂದೇ ಹೇಳಬೇಕು.

